ಅಜ್ಜಿ ಊರಿಂದ ನಗರದಲ್ಲಿದ್ದ ಮಗನ ಮನೆಗೆ ಬಂದಿದ್ದರು. 'ಮೊಮ್ಮಗನ ಮದುವೆಯಾಗಿ ಒಂದು ವರ್ಷವಾದರೂ ಅವರಿಗೆ ಇನ್ನೂ ಏಕೆ ಮಗುವಾಗಿಲ್ಲ?' ಎಂದು ವಿಚಾರಿಸಲು. ಅದು ಒಂದು ನೆಪ ಅಷ್ಟೇ. ಅವರಿಗೆ ಮುಖ್ಯವಾಗಿ ಬೇಕಾಗಿದ್ದದ್ದು ಮೊಮ್ಮಗನಿಗೆ ಗಂಡು ಮಗುವಾದರೆ ತಮಗೆ ಯಾವಾಗ ಕನಕಾಭಿಷೇಕವಾಗುತ್ತದೆ ಎಂಬುದು.

ಅಜ್ಜಿಗೆ ತನ್ನ ಸೊಸೆಯನ್ನು ಕಂಡರೆ ಬಲು ಪ್ರೀತಿ. ಈ ಅತ್ತೆ ಸೊಸೆಯರು ಬಾಕಿ ಲೋಕಾರೂಢಿ ಅತ್ತೆ ಸೊಸೆಯರ ತರಹ ಅಲ್ಲವೇ ಅಲ್ಲ. ಬಹಳ ಜನ ಇವರನ್ನು ತಾಯಿ ಮಗಳು ಎಂದುಕೊಂಡಿದ್ದಂತೂ ಸತ್ಯ; ಅಷ್ಟು ಅನ್ಯೋನ್ಯತೆ. ಇವರಿಬ್ಬರಿಗೂ ಮನೆಗೆ ಬಂದಿರುವ ಅಜ್ಜಿಯ ಮೊಮ್ಮಗನ ಹೆಂಡತಿ ಅಂದರೆ ಸೊಸೆಯ ಮೇಲೂ ಅಷ್ಟೇ ಪ್ರೀತಿ. ಅವಳು ಕೆಲಸ ಮಾಡಿದರೆ ಎಲ್ಲಿ ಸವೆದು ಹೋಗುತ್ತಾಳೋ ಎನ್ನುವಂತೆ ನೋಡಿಕೊಳ್ಳುತ್ತಿದ್ದರು. ಆ ಹುಡುಗಿಯು ಹೆದರಿದ ಹರಿಣದಂತೆ ಗಂಡನ ಮನೆಗೆ ಕಾಲಿಟ್ಟಿದ್ದಳು. ಇವರ ಪ್ರೀತಿಯ ಆರೈಕೆಯಿಂದಾಗಿ, ಅನೇಕ ವೇಳೆ ತನಗೆ ಮದುವೆ ಆಗಿರುವುದನ್ನು ಮರೆತು, ಚಿಕ್ಕ ಹುಡುಗಿಯಂತೆ ಆಡುತ್ತಿದ್ದಳು. ಇದಕ್ಕೆ ಹಿರಿಯರಿಬ್ಬರ ಅಂಗೀಕಾರದ ಮುದ್ರೆಯು ಬೀಳುತ್ತಿತ್ತು.

"ಅಜ್ಜಿ, ನನ್ನ ಹೆಂಡತಿಗೆ ಕಡೆಯ ಪಕ್ಷ ಕಾಫಿ ಮಾಡುವುದಕ್ಕಾದರೂ ಕಲಿಸಿಕೊಡಿ" ಎಂದು ಮೊಮ್ಮಗ ಆಗಾಗ ನೆನಪಿಸಿಕೊಡುತ್ತಿದ್ದ.

ಮನೆಗೆ ಬಂದ ಮೇಲೆ ಅಜ್ಜಿ ತಮ್ಮ ಸೂಕ್ಷ್ಮಾವಲೋಕನದ ಪತ್ತೇದಾರಿಕೆಯನ್ನು ಪ್ರಾರಂಭಿಸಿಬಿಟ್ಟಿದ್ದರು. ಅವರು ಪರಂಪರೆಯಿಂದ ಹರಿದು ಬಂದಿದ್ದ ಅನೇಕ ಜಾಣ್ಮೆಗಳನ್ನು ಮೈಗೂಡಿಸಿಕೊಂಡಿದ್ದರು. ಅದರಂತೆ ಅಜ್ಜಿ ಯೋಜನೆಗಳನ್ನು ಹೆಣೆದು, ಇತರರಿಗೆ ಅದರ ಸುಳಿವೂ ಸಿಕ್ಕದಂತೆ ಅವನ್ನು ಅನುಷ್ಠಾನಕ್ಕೆ ತರುವುದರಲ್ಲಿ ಬಲು ಚತುರೆ. ಹಾಗಾಗಿ ಅಜ್ಜಿಗೆ ಹುಡುಗಿಯಲ್ಲಿ ಯಾವ ಬದಲಾವಣೆಯು ಕಾಣದೆ ಯೋಚನೆಯಾಗಿತ್ತು. ಒಂದು ದಿನ ತನ್ನ ಸೊಸೆಗೆ, "ಏನು ಹುಡುಗರೋ, ಸ್ವಲ್ಪಾನೂ ಜವಾಬ್ದಾರಿಯೇ ಇಲ್ಲ. ನೀನು ನೋಡು, ನನ್ನ ಮಗನ್ನ ಮದುವೆಯಾದ ವರ್ಷಕ್ಕೆಲ್ಲ ಮಗುವಿನ ತಾಯಿಯಾಗಿದ್ದೆ. ನಾವೆಲ್ಲ ನಮ್ಮ ಅತ್ತೆ

